

بِسۡمِ اللّٰہِ الرَّحۡمٰنِ الرَّحِیۡمِ

# ಫಿಲಡೆಲ್ಫಿಯಾದಲ್ಲಿ ಮಸ್‌ಜಿದ್ ಉದ್ಘಾಟನೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಅಮೆರಿಕದ ಫಿಲಡೆಲ್ಫಿಯಾದ **'ಬೈತುಲ್ ಆಫಿಯಾತ್'** ಮಸೀದಿಯಲ್ಲಿ 19–10–2018 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

إِنَّمَا يَعْمُرُ مَسَاجِدَ اللَّهِ مَنْ آمَنَ بِاللَّهِ وَالْيَوْمِ الْآخِرِ وَأَقَامَ الصَّلَاةَ وَآتَى الزَّكَاةَ وَلَمْ يَخْشَ إِلَّا اللَّهَ فَعَسَىٰ أُولَٰئِكَ أَنْ يَكُونُوا مِنَ الْمُهْتَدِينَ

**ಇನ್ನಮಾ ಯಅ್‌ಮುರು ಮಸಾಜಿದಲ್ಲಾಹಿ ಮನ್ ಆಮನ ಬಿಲ್ಲಾಹಿ ವಲ್ ಯೌಮಿಲ್ ಆಖಿರಿ ವ ಅಖಾಮ ಸ್ವಲಾತ ವ ಆತಝ್ಝುಕಾತ ವಲಮ್ ಯಖ್‌ಶ ಇಲ್ಲಲ್ಲಾಹ ಫಅಸಾ ಉಲಾಯಿಕ ಅನ್ ಯಕೂನೂ ಮಿನಲ್ ಮುಹ್‌ತದೀನ್.**

ಯಾರು ಅಲ್ಲಾಹನಲ್ಲೂ ಅಂತ್ಯದಿನದ ಬಗ್ಗೆಯೂ ವಿಶ್ವಾಸವಿಡುತ್ತಾರೋ, ನಮಾಝನ್ನು ನಿಷ್ಠೆಯಿಂದ ನಿರ್ವಹಿಸುತ್ತಾರೋ, ಝಕಾತ್ ನೀಡುತ್ತಾರೋ, ಅಲ್ಲಾಹನಿಗೆ ಹೊರತು (ಬೇರೆ ಯಾರಿಗೂ) ಭಯಪಡುವುದಿಲ್ಲವೋ ಅವರು ಮಾತ್ರ ಅಲ್ಲಾಹನ ಮಸ್‌ಜಿದ್‌ಗಳನ್ನು ಪರಿಪಾಲಿಸುವ ಹಕ್ಕುದಾರರು. ಅಂಥವರೇ ಮಾರ್ಗದರ್ಶನ ಹೊಂದಬಲ್ಲವರು. (9:18).

ಅಲ್‌ಹಮ್‌ದುಲ್ಲಿಲ್ಲಾಹ್, ಅಲ್ಲಾಹನು ನಮಗೆ ಈ ನಗರದಲ್ಲಿ (ಎಂದರೆ ಫಿಲಡೆಲ್ಫಿಯಾದಲ್ಲಿ) ಪ್ರಥಮ ಮಸ್‌ಜಿದ್ ನಿರ್ಮಿಸುವ ಭಾಗ್ಯವನ್ನು ದಯಪಾಲಿಸಿದನು. ಇಂದು ಈ ಮಸ್‌ಜಿದ್‌ನ ಔಪಚಾರಿಕ ಉದ್ಘಾಟನೆಯಾಗಿದೆ. ಲೌಕಿಕ ಕಟ್ಟಡಗಳ ಅಥವಾ ಲೌಕಿಕ ಲಾಭ ಪಡೆಯಲು ನಿರ್ಮಿಸಿದ ಕಟ್ಟಡಗಳ ಉದ್ಘಾಟನೆಯ ಸಂದರ್ಭದಲ್ಲಿ ಬಾಹ್ಯವಾಗಿ ಲೌಕಿಕ ಸಂತೋಷಗಳನ್ನು ಪ್ರಕಟಿಸಲಾಗುತ್ತದೆ. ನಾವು ಇಂತಿಂತಹ ಲೌಕಿಕ ಲಾಭಗಳನ್ನು ಪಡೆಯುವೆವು ಎಂದು ಪ್ರಸ್ತಾಪಿಸಲಾಗುತ್ತದೆ. ಆದರೆ ನಾವು ಮಸ್‌ಜಿದನ್ನು ಉದ್ಘಾಟಿಸುವಾಗ, ನಾವು ಮಸ್‌ಜಿದನ್ನು ನಿರ್ಮಿಸುವಾಗ ನಾವು ಅಲ್ಲಾಹನ ಸಂಪ್ರೀತಿಯನ್ನು ಗಳಿಸಲು ಆಶಿಸುತ್ತೇವೆ. ಅಲ್ಲಾಹನ ಸಂಪ್ರೀತಿಯನ್ನು ಗಳಿಸಲು ಅಲ್ಲಾಹನು ಆಜ್ಞಾಪಿಸಿದ ಕೆಲಸಗಳನ್ನು ಮಾಡುವುದು ಆವಶ್ಯಕವಾಗಿದೆ. ಮಸ್‌ಜಿದ್ ನಿರ್ಮಾಣದ ಪ್ರಥಮ ಉದ್ದೇಶ ಅಲ್ಲಾಹನನ್ನು ಆರಾಧನೆ ಮಾಡಬೇಕೆಂಬ ನಮ್ಮ ಪ್ರಥಮ ಕರ್ತವ್ಯವನ್ನು ಈಡೆರಿಸುವುದಾಗಿದೆ. ಅಲ್ಲಾಹನು ನಮಗೆ ಹೇಳಿಕೊಟ್ಟ ರೀತಿಯಲ್ಲಿ ಆ ಕರ್ತವ್ಯವನ್ನು ಈಡೇರಿಸಬೇಕಾಗಿದೆ. ನಾನು ಪಠಿಸಿದ ಪವಿತ್ರ ಖುರ್‌ಆನಿನ ವಚನದಲ್ಲಿ ಮಸ್‌ಜಿದ್ ನಿರ್ಮಾಣ ಮಾಡುವವರ ಉದ್ದೇಶ ಏನಾಗಿರಬೇಕೆಂದು ಅಲ್ಲಾಹನು ನಮಗೆ ತಿಳಿಸಿದ್ದಾನೆ. ಅಥವಾ ಮಸ್‌ಜಿದ್ ನಿರ್ಮಾಣದ ಉದ್ದೇಶಲಕ್ಷ್ಯವನ್ನು ಈಡೇರಿಸುವ ಜನರು ಯಾರೆಂದು ಅಲ್ಲಾಹನು ಹೇಳಿದ್ದಾನೆ. ಮಸ್‌ಜಿದನ್ನು ಯಾವಾಗಲೂ ಜನನಿಬಿಡವನ್ನಾಗಿ ಮಾಡಬೇಕೆಂದು ಚಿಂತಿಸುವವರು ಅವರಾಗಿದ್ದಾರೆ. ಮಸ್‌ಜಿದನ್ನು ಉತ್ತಮ ಸ್ಥಿತಿಯಲ್ಲಿ ಕಾಪಾಡಲು ಅವರು ಚಿಂತಿಸುತ್ತಾ ಇರುತ್ತಾರೆ. ಅವರು ಅಲ್ಲಾಹನನ್ನು ಮತ್ತು ಅಂತಿಮ ವಿಚಾರಣೆಯ ದಿನವನ್ನು ನಂಬುವವರಾಗಿರುತ್ತಾರೆ.

ನಾವು ಅಲ್ಲಾಹನ ಬಗ್ಗೆ ಮತ್ತು ಅಂತಿಮ ವಿಚಾರಣೆಯ ದಿನದ ಬಗ್ಗೆ ನಂಬುತ್ತೇವೆ ಎಂದು ಎಲ್ಲರೂ ಹೇಳುತ್ತಾರೆ. ಆದರೆ ಅಲ್ಲಾಹನು ಹೇಳುವುದೇನೆಂದರೆ ಅದರ ಕೃತ್ಯರೂಪದ ಪ್ರಕಟಣೆ ಆಗಬೇಕಾದುದು ಆವಶ್ಯಕವಾಗಿದೆ ಎಂದು. ಅದನ್ನು ಪ್ರಾಯೋಗಿಕವಾಗಿ ಪ್ರಕಟಿಸುವುದು ಹೇಗೆ? ಅದರ ಪ್ರಾಯೋಗಿಕ ಆಚರಣೆ ಮೊದಲನೆಯದಾಗಿ ಬಾಜಮಾಅತ್ ನಮಾಝ್ ನಿರ್ವಹಿಸುವ ಮೂಲಕ ನಡೆಸಬೇಕಾಗಿದೆ. ಎರಡನೆಯದಾಗಿ ನಮಾಝ್ ಅನುಷ್ಠಿಸುವಾಗ ಅಲ್ಲಾಹನ ಕಡೆಗೆ ಶ್ರದ್ಧೆಯಿಟ್ಟು ನಮಾಝ್ ನಿರ್ವಹಿಸಬೇಕಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಪದೇಶಗಳಿಂದಲೂ ವ್ಯಾಖ್ಯಾನಗಳಿಂದಲೂ ನಮಗೆ ತಿಳಿದು ಬರುವುದು ಇದೇ ಆಗಿದೆ. ನಮಾಝನ್ನು ವಾಸ್ತವಿಕವಾಗಿ ಕಾಪಾಡುವವರು, ಬಾಜಮಾಅತ್ ನಮಾಝ್ ಅನುಷ್ಠಿಸುವ ಅಭ್ಯಾಸ ಹೊಂದಿದವರೂ ನಮಾಝ್ ಅನುಷ್ಠಿಸುವಾಗ ಅಲ್ಲಾಹನ ಕಡೆಗೆ ಮಾತ್ರ ಶ್ರದ್ಧೆ ನೀಡುವವರೂ ಆಗಿರುತ್ತಾರೆ. ಅವರು ದುಆ, ಇಸ್ತಿಗ್‌ಫಾರ್‌ನೊಂದಿಗೆ ಪೂರ್ಣ ಶ್ರದ್ಧೆಯಿಟ್ಟು ನಮಾಝ್ ನಿರ್ವಹಿಸುವವರಾಗಿರುತ್ತಾರೆ.

ಅಲ್ಲಾಹನು ಹೇಳಿದ ಇನ್ನೊಂದು ವಿಷಯ ಅಂತಹ ಜನರು ಝಕಾತ್ ಕೊಡುವವರಾಗಿರುತ್ತಾರೆ ಎಂದಾಗಿದೆ. ಅವರು ಧಾರ್ಮಿಕ ಕಾರ್ಯಗಳಿಗೋಸ್ಕರ ಸಾಂಪತ್ತಿಕ ತ್ಯಾಗ ಮಾಡುವವರಾಗಿರುತ್ತಾರೆ. ಅಲ್ಲಾಹನ ಸೃಷ್ಟಿಗಳ ಹಿತಕ್ಕೋಸ್ಕರ ಅವರಿಗೆ ಸಲ್ಲಬೇಕಾದ ಹಕ್ಕುಗಳನ್ನು ಈಡೇರಿಸಲು ಆರ್ಥಿಕ ತ್ಯಾಗ ಮಾಡುವವರಾಗಿರುತ್ತಾರೆ. ಆದುದರಿಂದ ಒಬ್ಬ ಸತ್ಯವಿಶ್ವಾಸಿಯಾದ ಮುಸ್ಲಿಮನ ಹೊಣೆಗಾರಿಕೆ ಸಾಮಾನ್ಯವಾದುದೇನೂ ಅಲ್ಲ. ಈ ಮಸ್‌ಜಿದನ್ನು ನಿರ್ಮಿಸಿದ ನಂತರ ಇಲ್ಲಿಗೆ ಬರುವವರ ಅಥವಾ ಈ ಮಸ್‌ಜಿದನ್ನು ತಮ್ಮದು ಎಂದು ಹೇಳುವವರ ಹೊಣೆಗಾರಿಕೆಗಳು ಮೊದಲಿಗಿಂತ ಬಹಳ ವರ್ಧಿಸಿವೆ. ನೀವೆಲ್ಲರೂ ಆರಾಧನೆ ಮಾಡಬೇಕಾದ ನಿಮ್ಮ ಕರ್ತವ್ಯಗಳನ್ನು ಈಡೇರಿಸಬೇಕಾಗಿದೆ ಮತ್ತು ಅಲ್ಲಾಹನ ಸೃಷ್ಟಿಗಳ ಹಕ್ಕುಗಳನ್ನು ಸಹ ಈಡೇರಿಸಬೇಕಾಗಿವೆ. ಹಾಗೆ ಮಾಡಿದರೆ ಮಾತ್ರ ನೀವು ಅಲ್ಲಾಹನ ಸನ್ನಿಧಿಯಲ್ಲಿ ಸನ್ಮಾರ್ಗ ಗಳಿಸಿದವರಾಗಿ ಗಣಿಸಲ್ಪಡುವಿರಿ. ಅಲ್ಲಾಹನು ತನ್ನ ಪ್ರೀತಿಯಿಂದ ವೀಕ್ಷಿಸುವವರಲ್ಲಿ ನೀವು ಗಣಿಸಲ್ಪಡುವಿರಿ. ನಾನು ಪಠಿಸಿದ ಪವಿತ್ರ ಖುರ್‌ಆನ್ ವಚನದ ಹಿಂದಿನ ವಚನದಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ. ಮಸ್‌ಜಿದ್‌ಗಳನ್ನು ನಿರ್ಮಿಸುವ ಅಥವಾ ಅವುಗಳನ್ನು ಜನನಿಬಿಡವನ್ನಾಗಿ ಮಾಡುವ ಹಕ್ಕು ಬಹುದೇವಾರಾಧಕರಿಗಿಲ್ಲ. ಅವರ ಹೃದಯ ದೇವೇತರದಿಂದ

ತುಂಬಿದೆ. ಅವರು ಅಲ್ಲಾಹನ ಹಕ್ಕುಗಳನ್ನು ಈಡೇರಿಸಲು ಸಾಧ್ಯವೇ ಇಲ್ಲ. ಅಲ್ಲಾಹನ ಸೃಷ್ಟಿಗಳ ಹಕ್ಕುಗಳನ್ನು ಅವರು ಈಡೇರಿಸಲು ಸಮರ್ಥರಾಗಲಾರರು.

ಶಿರ್ಕ್ (ಬಹುದೇವಾರಾಧನೆ) ಅನೇಕ ವಿಧಗಳಲ್ಲಿವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದಾರೆ: ಒಂದನೆಯದು ಸ್ಥೂಲ ಶಿರ್ಕ್ ಆಗಿದೆ. ಅದು ಮನುಷ್ಯನನ್ನು, ಮೂರ್ತಿಯನ್ನು ಅಥವಾ ಬೇರೆ ನಿರ್ಜೀವ ವಸ್ತುಗಳನ್ನು ಅಥವಾ ಶಕ್ತಿಗಳನ್ನು ಅಥವಾ ಊಹಾತ್ಮಕ ದೇವರುಗಳನ್ನು, ದೇವತೆಗಳನ್ನು ವಾಸ್ತವಿಕ ದೇವನನ್ನಾಗಿ ಮಾಡಿಕೊಳ್ಳುವುದು. ಇನ್ನೊಂದು ರೀತಿಯ ಶಿರ್ಕ್ ವಿಷದ ಹಾಗೆ ರಹಸ್ಯವಾಗಿ ಪ್ರಭಾವ ಬೀರುತ್ತದೆ. ಅದು ಈ ಕಾಲಘಟ್ಟದಲ್ಲಿ ಬಹಳ ವರ್ಧಿಸುತ್ತಾ ಇದೆ. ಅದು ಅಲ್ಲಾಹನ ಬಗ್ಗೆ ಭರವಸೆ ಸಂಪೂರ್ಣವಾಗಿ ನಶಿಸಿ ಹೋಗುವುದಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅದನ್ನು ಹೀಗೆ ವಿವರಿಸಿದ್ದಾರೆ: ಸಾಧನ ಸಾಮಗ್ರಿಗಳ ಬಗ್ಗೆ ಮತ್ತು ಬೇರೆ ವಿಷಯಗಳ ಬಗ್ಗೆ ಅಲ್ಲಾಹನಲ್ಲಿ ಭರವಸೆ ಹೊಂದಿರುವುದಕ್ಕಿಂತ ಹೆಚ್ಚಿನ ಮಟ್ಟದ ಭರವಸೆ ಹೊಂದಿರುವುದು. ತಮ್ಮ ಉದ್ಯೋಗದ ಬಗ್ಗೆ, ತಮ್ಮ ಕಾರ್ಯಭಾರಗಳ ಬಗ್ಗೆ, ತಮ್ಮ ಲೌಕಿಕ ವೃತ್ತಿಗಳ ಬಗ್ಗೆ ಹೆಚ್ಚಿನ ಮಟ್ಟದ ಶ್ರದ್ಧೆ ಹೊಂದಿರುವುದು. ಈ ಕಾರಣದಿಂದ ನಮಾಝ್‌ಗಳ ಬಗ್ಗೆ ನಿರ್ಲಕ್ಷ್ಯತೆ ಇರುತ್ತದೆ. ಮಸ್‌ಜಿದನ್ನು ಜನನಿಬಿಡವನ್ನಾಗಿ ಮಾಡುವ ಬಗ್ಗೆ ಸಹ ನಿರ್ಲಕ್ಷ್ಯತೆ ಇರುತ್ತದೆ. ಆದುದರಿಂದ ನಾವು ಪ್ರಾರ್ಥಿಸಬೇಕು, ವಿನಯಾನ್ವಿತರಾಗಿ ನಾವು ಪ್ರಾರ್ಥಿಸಬೇಕು: ಓ ಅಲ್ಲಾಹ್ ನಮ್ಮನ್ನು ಪರಿಪೂರ್ಣ ಸತ್ಯವಿಶ್ವಾಸಿಗಳನ್ನಾಗಿ ಮಾಡು.

ನಾವು ಫಿಲಡೆಲ್ಫಿಯಾದಲ್ಲಿ ಒಂದು ದೊಡ್ಡದಾದ ಸುಂದರವಾದ ಮಸ್‌ಜಿದನ್ನು ನಿರ್ಮಿಸಿದೆವು ಎಂದು ಮಾತ್ರ ಸಂತೋಷ ಪ್ರಕಟಿಸಿದರೆ ಸಾಕಾಗಲಾರದು. ನಾವು ಈ ಮಸ್‌ಜಿದ್‌ಗೆ ಸಂಬಂಧಿಸಿದ ಹಕ್ಕುಗಳನ್ನು ಈಡೇರಿಸಿ ಅಲ್ಲಾಹನ ಸನ್ನಿಧಿಯಲ್ಲಿ ಹಾಜರಾಗುವಾಗ ಹೀಗೆ ಆಲಿಸುವವರಾಗಬೇಕು: ಈ ಜನರು ಮಸ್‌ಜಿದನ್ನು ಅಲ್ಲಾಹನಿಗೋಸ್ಕರ ನಿರ್ಮಿಸಿದರು ಮತ್ತು ಅದಕ್ಕೆ ಸಂಬಂಧಿಸಿದ ಹಕ್ಕುಗಳನ್ನು ಸಹ ಈಡೇರಿಸಲು ಪ್ರಯತ್ನಿಸಿದವರಾಗಿದ್ದಾರೆ. ಆದುದರಿಂದ ನಾವು ಇಂತಹ ಯೋಚನೆಯನ್ನು ನಮ್ಮಲ್ಲಿ ಸೃಷ್ಟಿಸಲು ಪ್ರಯತ್ನಿಸಬೇಕಾಗಿದೆ. ನಾವು ಆ ರೀತಿ ಯೋಚಿಸುವುದಾದರೆ ಮತ್ತು ಆ ರೀತಿ ಪ್ರಯತ್ನಿಸುವವರಾದರೆ ನಾವು ಈ ಮಸ್‌ಜಿದ್ ನಿರ್ಮಾಣದ ಅನುಗ್ರಹವನ್ನು ಇಹಲೋಕದಲ್ಲಿಯೇ ಅನುಭವಿಸುವೆವು ಮತ್ತು ನಮ್ಮ ಮಕ್ಕಳು ಮತ್ತು ಸಂತಾನ ಪರಂಪರೆ ಧರ್ಮದೊಂದಿಗೆ ಜೋಡಿಸಿಕೊಂಡವರಾಗುವರು. ನಾವು ಅಲ್ಲಾಹನ ಸಂದೇಶವನ್ನು ಈ ಪ್ರದೇಶದಲ್ಲಿಯೂ ಈ ನಗರದಲ್ಲಿಯೂ ಹಬ್ಬುವವರಾಗುವೆವು. ನಾವು ಏಕದೇವ ವಿಶ್ವಾಸವನ್ನು ಲೋಕದಲ್ಲಿ ಸ್ಥಾಪಿಸುವವರಾಗುವೆವು. ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪತಾಕೆಯನ್ನು ಲೋಕದಲ್ಲಿ ಹಾರಿಸುವವರಾಗುವೆವು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಮಸ್‌ಜಿದ್‌ಗಳನ್ನು ನಿರ್ಮಿಸುವ ಇನ್ನೊಂದು ಉದ್ದೇಶವನ್ನು ಹೀಗೆ ವಿವರಿಸಿದ್ದಾರೆ: ಇಸ್ಲಾಮಿನ ನೈಜ ಉಪದೇಶಗಳನ್ನು ಮತ್ತು ನೈಜ ಸಂದೇಶಗಳನ್ನು ಯಾವ ಪ್ರದೇಶಕ್ಕೆ ತಲಪಿಸಲು ಇಚ್ಛಿಸುತ್ತೀರೋ ಆ ಪ್ರದೇಶದಲ್ಲಿ ನೀವು ಮಸ್‌ಜಿದನ್ನು ನಿರ್ಮಿಸಿರಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಈಗ ನಮ್ಮ ಜಮಾಅತಿಗೆ ಮಸ್‌ಜಿದ್‌ಗಳ ಬಹಳ ಆವಶ್ಯಕತೆ ಇದೆ. ಮಸ್‌ಜಿದ್ ಅಲ್ಲಾಹನ ಭವನವಾಗಿದೆ. ಒಂದು ಗ್ರಾಮದಲ್ಲಿ ಅಥವಾ ನಗರದಲ್ಲಿ ನಮ್ಮ ಮಸ್‌ಜಿದ್ ನಿರ್ಮಿಸಲ್ಪಟ್ಟರೆ ನೀವು ತಿಳಿದುಕೊಳ್ಳಿರಿ, ಜಮಾಅತಿನ ಅಭಿವೃದ್ಧಿಗೆ ಅಸ್ತಿಭಾರ ಹಾಕಲಾಯಿತು ಎಂದು. ಒಂದು ಗ್ರಾಮದಲ್ಲಿ ಮುಸ್ಲಿಮರು ಕಡಿಮೆ ಸಂಖ್ಯೆಯಲ್ಲಿ ಇದ್ದರೆ ಅಥವಾ ಮುಸ್ಲಿಮರು ಇಲ್ಲದೆ ಇದ್ದರೆ ಅಲ್ಲಿ ಇಸ್ಲಾಮಿಗೆ ಅಭಿವೃದ್ಧಿ ನೀಡಲು ಒಂದು ಮಸ್‌ಜಿದನ್ನು ನಿರ್ಮಿಸಬೇಕು. ಅಲ್ಲಿಗೆ ಅಲ್ಲಾಹನು ಮುಸ್ಲಿಮರನ್ನು ಎಳೆದುಕೊಂಡು ತರುವನು. ಆದರೆ ಶರತ್ತೇನೆಂದರೆ ಮಸ್‌ಜಿದ್‌ನ ನಿರ್ಮಾಣದ ಸಂಕಲ್ಪ ಶುದ್ಧವಾಗಿರಬೇಕು. ಮಸ್‌ಜಿದ್ ನಿರ್ಮಾಣ ಅಲ್ಲಾಹನಿಗೋಸ್ಕರವಾಗಿರಬೇಕು. ಸ್ವಾರ್ಥ ಉದ್ದೇಶಲಕ್ಷ್ಯಗಳು ಮತ್ತು ಬೇರೆ ರೀತಿಯ ಯಾವುದೇ ಕೆಡುಕು ಖಂಡಿತವಾಗಿಯೂ ಇಲ್ಲದಿದ್ದರೆ ಅಲ್ಲಾಹನು ಅನುಗ್ರಹ ನೀಡುವನು. ನಾವು ನೆನಪಿಡಬೇಕಾದುದೇನೆಂದರೆ ಮಸ್‌ಜಿದ್ ನಿರ್ಮಾಣಕ್ಕೋಸ್ಕರ ನಾವು ಸಾಂಪತ್ತಿಕ ತ್ಯಾಗ ಮಾಡುತ್ತೇವೆ ಆದರೆ ಅದರಲ್ಲಿ ಯಾವುದೇ ತೋರಿಕೆ ಇರಬಾರದು. ಬದಲಾಗಿ ನಾವು ಹೀಗೆ ಸಂಕಲ್ಪ ಹೊಂದಬೇಕು. ಮಸ್‌ಜಿದ್ ನಿರ್ಮಿಸಿದ ನಂತರ ನಾವು ಆರಾಧನೆಗೆ ಸಂಬಂಧಿಸಿದ ನಮ್ಮ ಕರ್ತವ್ಯಗಳನ್ನು ಈಡೇರಿಸುವವರಾಗುವೆವು ಎಂದು. ಆಗ ನಮ್ಮ ಮುಂದಿನ ಪೀಳಿಗೆ ಸುರಕ್ಷಿತವಾಗಿರುವುದು ಮತ್ತು ಧರ್ಮದೊಂದಿಗೆ ಜೋಡಿಸಲ್ಪಟ್ಟಿರುವುದು.

ಈ ಮಸ್‌ಜಿದನ್ನು ನಿರ್ಮಿಸಿ ಜನರಿಂದ ತುಂಬಿಸುವುದರೊಂದಿಗೆ ಇನ್ನೊಂದು ದೊಡ್ಡ ಹೊಣೆಗಾರಿಕೆ ಸಹ ಇಲ್ಲಿ ವಾಸಿಸುವವರ ಮೇಲಿದೆ. ಈ ಮಸ್‌ಜಿದನ್ನು ಈ ಪ್ರದೇಶದಲ್ಲಿ ಇಸ್ಲಾಮ್ ಧರ್ಮದ ಪ್ರಚಾರ ಮಾಧ್ಯಮವನ್ನಾಗಿ ನೀವು ಮಾಡಬೇಕು. 1920ರಲ್ಲಿ ಹಝ್ರತ್ ಮುಫ್ತಿ ಮುಹಮ್ಮದ್ ಸಾದಿಖ್ ಸಾಹಿಬರು ಮುಬಲ್ಲಿಗರಾಗಿ ಅಮೇರಿಕಕ್ಕೆ ಆಗಮಿಸಿದಾಗ ಈ ಫಿಲಡೆಲ್ಫಿಯಾ ನಗರದ ಬಂದರಿನಲ್ಲಿ ಹಡಗಿನಿಂದ ಇಳಿದರು. ಆದರೆ ಆಗ ದೇಶದೊಳಗೆ ಪ್ರವೇಶಿಸಲು ಅವರಿಗೆ ಅನುಮತಿಯನ್ನು ಸರಕಾರ ನೀಡಲಿಲ್ಲ. ಅವರನ್ನು ಒಂದು ಮನೆಯಲ್ಲಿ ಬಂಧಿಸಿಡಲಾಗಿತ್ತು. ಅಲ್ಲಿ ಬೇರೆ ಸೆರೆಯಾಳುಗಳು ಸಹ ಇದ್ದರು. ಅಲ್ಲಿ ಅವರ ತಬ್ಲೀಗ್ ಕಾರಣದಿಂದ ಎರಡು ತಿಂಗಳೊಳಗೆ ಕೆಲವು ಸೆರೆಯಾಳುಗಳು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರು. ಅವರು ತಮ್ಮ ತಬ್ಲೀಗಿನೊಂದಿಗೆ ತಮ್ಮ ಕರ್ಮಗಳ ಮೂಲಕ ಉದಾಹರಣೆ ತೋರಿಸಿದರು. ಅವರು ತಮ್ಮ ತಖ್ವ ಪ್ರಕಟಿಸಿದರು. ಮತ್ತು ದುಆ ಸಹ ಮಾಡಿದ್ದರು. ಆದುದರಿಂದ ತಬ್ಲೀಗ್‌ನೊಂದಿಗೆ ಇವುಗಳೂ ಆವಶ್ಯಕವಾಗಿವೆ. ಹಝ್ರತ್ ಮುಫ್ತಿ ಸಾಹಿಬರು ಇಲ್ಲಿದ್ದಾಗ ಐದಾರು ಸಾವಿರ ಜನರು ಅಹ್ಮದಿಯರಾದರೆಂದು ಹೇಳಲಾಗುತ್ತಿದೆ. ಹಝ್ರತ್ ಮುಸ್ಲಿಹ್ ಮೌಊದ್

ರಝಿಯಲ್ಲಾಹು ಅನ್‌ಹು ಆಗ ಹೀಗೆ ಹೇಳಿದರು: ಬೈಅತ್ ಮಾಡಿದವರ ಸಂಖ್ಯೆ ಇಷ್ಟು ಆಗಿದ್ದರೆ ಕೆಲವು ದಶಕಗಳೊಳಗೆ ಅವರ ಸಂಖ್ಯೆ ಲಕ್ಷಗಳಿಗೆ ತಲಪಲು ಸಾಧ್ಯವಿದೆ. ಆದರೆ ಆ ಟಾರ್ಗೆಟ್ ತಲಪಲಾಗಲಿಲ್ಲ. ಆಗ ಹಲವು ತಡೆಗಳಿದ್ದುವು ನಮ್ಮ ಬಲಹೀನತೆಗಳೂ ಇದ್ದುವು. ಆದರೆ ನಾವು ದೃಢ ನಿರ್ಧಾರದೊಂದಿಗೆ ಪ್ರಯತ್ನ ಮಾಡುವ ಸಂದರ್ಭ ಈಗ ಒದಗಿ ಬಂದಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೀವಿತ ಕಾಲದಲ್ಲಿಯೇ ಅವರ ಸಂದೇಶ ಇಲ್ಲಿಗೆ ತಲಪಿತ್ತು. ಅದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಗ್ರಂಥವಾದ ಬರಾಹೀನೆ ಅಹ್ಮದಿಯಾದಲ್ಲಿ ಹೀಗೆ ಬರೆದಿದ್ದಾರೆ: ಅಮೇರಿಕದ ಫಿಲಡೆಲ್ಫಿಯಾದಲ್ಲಿ ಡಾಕ್ಟರ್ ಜಾರ್ಜ್ ಬೇಕರ್ ಎಂಬವರು ರಿವ್ಯೂ ಆಫ್ ರಿಲೀಜಿಯನ್ಸ್ ಪತ್ರಿಕೆಯಲ್ಲಿ ನನ್ನ ಹೆಸರು ಮತ್ತು ನನ್ನ ಬಗ್ಗೆ ಲೇಖನ ಓದಿ, ನನಗೆ ನಿಮ್ಮ ಇಮಾಮರ ಅಭಿಪ್ರಾಯಗಳ ಬಗ್ಗೆ ಸಂಪೂರ್ಣ ಒಮ್ಮತವಿದೆ ಎಂದು ಪತ್ರ ಬರೆದಿದ್ದಾರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಇಸ್ಲಾಮನ್ನು ಯಾವ ರೀತಿ ಲೋಕದ ಮುಂದೆ ಇರಿಸಿದ್ದರೋ ಅದೇ ರೂಪದಲ್ಲಿ ಅವರು ಸಹ ಇಸ್ಲಾಮನ್ನು ಲೋಕದ ಮುಂದೆ ಇರಿಸುತ್ತಿದ್ದಾರೆ ಎಂದು ಸಹ ಬರೆದಿದ್ದಾರೆ.

ಈ ನಗರಕ್ಕೆ ಅಂದಾಜು ಒಂದು ನೂರು ವರ್ಷಗಳ ಹಿಂದೆ ಅಹ್ಮದಿಯತ್ ಆಗಮಿಸಿತು. ಈಗ ಈ ನಗರದಲ್ಲಿ ಒಂದು ಸುಂದರ ಮಸ್‌ಜಿದನ್ನು ನಿರ್ಮಿಸಲು ಅಲ್ಲಾಹನು ನಮಗೆ ಭಾಗ್ಯ ನೀಡಿದ್ದಾನೆ. ಈ ಮಸ್‌ಜಿದ್ ಮೂಲಕ ಇಲ್ಲಿನ ಜಮಾಅತ್ ಮತ್ತು ಮುಬಲ್ಲಿಗರು ದೃಢ ಇಚ್ಛಾಶಕ್ತಿಯೊಂದಿಗೆ ತಬ್ಲೀಗಿನ ಎಂತಹ ಕಾರ್ಯಕ್ರಮಗಳನ್ನು ರೂಪಿಸಬೇಕೆಂದರೆ ಎಲ್ಲಾ ಕಡೆಗಳಲ್ಲೂ ಇಸ್ಲಾಮಿನ ಸುಂದರ ಉಪದೇಶಗಳು ಮತ್ತು ಸಂದೇಶ ಹರಡುವಂತಾಗಲಿ. ಈ ಪ್ರದೇಶ ಶಾಂತಿ ಮತ್ತು ಸೌಂದರ್ಯದ ದೃಷ್ಟಿಯಿಂದ ಎಂತಹ ಪ್ರದೇಶವಾಗಲಿ ಎಂದರೆ ಜನರು ಇಲ್ಲಿಗೆ ಬಂದು ವಾಸಿಸಲು ಬಯಸುವವರಾಗಲಿ. ಜನಸಂಖ್ಯೆಯ ದೃಷ್ಟಿಯಲ್ಲಿ ಈ ನಗರ ಅಮೇರಿಕದ ಆರನೆಯ ದೊಡ್ಡ ನಗರವಾಗಿದೆ. ಈ ನಗರದಲ್ಲಿ ಮತ್ತು ಸುತ್ತು ಮುತ್ತಲಿನ ಪ್ರದೇಶಗಳಲ್ಲಿ ಇಸ್ಲಾಮಿನ ನೈಜ ಸಂದೇಶವನ್ನು ತಲಪಿಸುವುದಾದರೆ ಈ ಜನರಿಂದಲೇ ಎಂತಹ ಜನರು ಹುಟ್ಟುವರು ಎಂದರೆ ಅವರು ನಿಜವಾದ ಆರಾಧಕರೂ ಮಸ್‌ಜಿದ್‌ಗಳನ್ನು ಜನನಿಬಿಡವನ್ನಾಗಿ ಮಾಡುವವರೂ ಅಲ್ಲಾಹನನ್ನು ಭಯಪಡುವವರೂ ಸನ್ಮಾರ್ಗ ಗಳಿಸಿದವರೂ ಆಗುವರು.

ಒಟ್ಟಿನಲ್ಲಿ, ನಾವು ನಿರ್ಮಿಸುವ ಪ್ರತಿಯೊಂದು ಮಸ್‌ಜಿದ್ ನಮಗೆ ದೊಡ್ಡದಾದೊಂದು ಪಂಥಾಹ್ವಾನವನ್ನು ನೀಡುತ್ತದೆ. ನಾವು ನಮ್ಮ ಸ್ಥಿತಿಯನ್ನು ಸರಿಪಡಿಸಬೇಕಾಗಿದೆ. ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸುವುದರಲ್ಲಿಯೂ ನಮ್ಮ ಕರ್ಮಾನುಷ್ಠಾನಗಳಲ್ಲೂ ನಾವು ನಮ್ಮ ಸ್ಥಿತಿಯನ್ನು ಉತ್ತಮಗೊಳಿಸಬೇಕಾಗಿದೆ. ನಾವು ತಬ್ಲೀಗಿನ ಕ್ಷೇತ್ರವನ್ನು ತೆರೆಯಬೇಕಾಗಿದೆ. ನಾವು ಮಸ್‌ಜಿದ್ ನಿರ್ಮಿಸಿದೆವು ಎಂದು ಸಂತೋಷಗೊಂಡು ಸುಮ್ಮನೆ ಕುಳಿತಿರಬಾರದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವವರಾದ ನಮ್ಮ ಕೆಲಸವೇನೆಂದರೆ ನಾವು ನಮ್ಮ ಎಲ್ಲಾ ಶಕ್ತಿ ಸಾಮರ್ಥ್ಯಗಳನ್ನು ಬಳಸಿಕೊಂಡು ನಮ್ಮ ಸ್ಥಿತಿಯನ್ನೂ ನಮ್ಮ ಆರಾಧನೆಗಳನ್ನೂ ಎಂತಹ ಮಟ್ಟಕ್ಕೆ ತಲಪಿಸಬೇಕೆಂದರೆ ಅವು ಅಲ್ಲಾಹನಿಗೆ ಅಂಗೀಕಾರಾರ್ಹವಾಗಬೇಕು. ಅವುಗಳ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಪದೇ ಪದೇ ನಮ್ಮ ಗಮನವನ್ನು ಹರಿಸಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸಂದರ್ಭದಲ್ಲಿ ಹೇಳಿದರು: ಮಸ್‌ಜಿದ್‌ಗಳ ನಿಜವಾದ ಸೌಂದರ್ಯ ಕಟ್ಟಡಗಳೊಂದಿಗೆ ಸಂಬಂಧಿಸಿಲ್ಲ. ಅದು ನಮಾಝ್ ಅನುಷ್ಠಿಸುವವರಿಗೆ ಸಂಬಂಧಿಸಿದೆ. ನಿಷ್ಠಾವಂತರಾಗಿ ನಮಾಝ್ ಅನುಷ್ಠಿಸುವವರೊಂದಿಗೆ ಸಂಬಂಧಿಸಿದೆ. ಮಸ್‌ಜಿದ್‌ಗಳ ಬಗ್ಗೆ ಆಜ್ಞೆ ಇರುವುದೇನೆಂದರೆ ಅವುಗಳನ್ನು ತಖ್ವ ಗಳಿಕೆಗೋಸ್ಕರ ನಿರ್ಮಿಸಬೇಕೆಂದು. ಆದುದರಿಂದ ನಿಷ್ಠೆಯಿಂದ ನಮಾಝ್ ಅನುಷ್ಠಿಸುವುದಾದರೆ ಮತ್ತು ತಖ್ವದಿಂದ ಜೀವಿಸಿ ಮಸ್‌ಜಿದನ್ನು ಜೀವಂತವನ್ನಾಗಿ ಮಾಡುವುದಾದರೆ ಆರಾಧನೆಗಳು ಅಂಗೀಕಾರ ಪಡೆಯುವುವು. ಮುಸ್ಲಿಮೇತರರಲ್ಲಿ ಇಸ್ಲಾಮಿನ ತಬ್ಲೀಗ್ ಸಹ ಸರಿಯಾದ ರೀತಿಯಲ್ಲಿ ನಡೆಸಲು ಸಾಧ್ಯವಾಗುವುದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ಸಂದರ್ಭದಲ್ಲಿ ಹೀಗೆ ಹೇಳಿದ್ದರು: ಒಳಿತಿನ ವಿಷಯಗಳನ್ನು ಕಲಿತುಕೊಳ್ಳಬೇಕೆಂಬ ಸಂಕಲ್ಪದೊಂದಿಗೆ ನಮ್ಮ ಮಸ್‌ಜಿದನ್ನು ಪ್ರವೇಶಿಸುವವರು ಜಿಹಾದ್ ಮಾಡುವವರ ಹಾಗೆಯೇ ಆಗುವರು.

ಇಂದಿನ ಕಾಲದಲ್ಲಿ ಇಸ್ಲಾಮಿನ ವಿರುದ್ಧ ಅಪಪ್ರಚಾರ ಮಾಡಲಾಗುತ್ತದೆ – ಅದು ಜಿಹಾದ್ ಮಾಡಲು ಉಪದೇಶಿಸುತ್ತಿದೆ ಎಂದು. ಕೆಲವು ಮುಸ್ಲಿಮರು ಮಾಡುವ ಕೆಲಸಗಳು ಈ ಅಪಕೀರ್ತಿಗೆ ಕಾರಣವಾಗಿರುತ್ತದೆ. ಆದರೆ ನೈಜ ಸತ್ಯವಿಶ್ವಾಸಿಯ ಕೆಲಸ ಒಳಿತುಗಳನ್ನು ಕಲಿತುಕೊಂಡು ಕರ್ಮನಿರತನಾಗುವುದಾಗಿದೆ. ಈ ರೀತಿ ಒಳಿತನ್ನು ಹರಡುತ್ತಾ ಅವನು ಜಿಹಾದ್ ಮಾಡುತ್ತಾನೆ. ಇಂತಹ ಜಿಹಾದ್ ಮಾಡುವುದು ಅಹ್ಮದಿಯರಾದ ನಮ್ಮ ಕೆಲಸವಾಗಿದೆ.

ಪ್ರತಿಯೊಬ್ಬ ಅಹ್ಮದಿಯ ಮುಂದೆ ಕೇವಲ ಇಹಲೋಕದ ಸಂತೋಷಗಳು ಮತ್ತು ಆಶಾಭಿಲಾಷೆಗಳು ಮಾತ್ರ ಇದ್ದರೆ ಸಾಕಾಗಲಾರದು. ಪ್ರತಿಯೊಬ್ಬ ಅಹ್ಮದಿಗೆ ಪರಲೋಕದ ಬಗ್ಗೆ ಸಹ ಚಿಂತೆ ಇರಬೇಕು. ಅಲ್ಲಿನ ಪಾರಿತೋಷಕಗಳು ಮತ್ತು ಗಳಿಕೆಗಳು ಯಾವಾಗಲೂ ಇರುವವುಗಳಾಗಿವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೀಗೆ ಹೇಳಿದ್ದಾರೆ: ಅಲ್ಲಾಹನು ಸಹ ಮನುಷ್ಯನ ಕರ್ಮಗಳ ದೈನಂದಿನ ದಾಖಲೆ ಇರಿಸುತ್ತಾನೆ. ಆದುದರಿಂದ ಮನುಷ್ಯನು ಸಹ ತನ್ನ ಸ್ಥಿತಿಯ ಬಗ್ಗೆ ದೈನಂದಿನ ದಾಖಲೆ ತಯಾರಿಸಬೇಕು. ಮನುಷ್ಯನ ಇಂದು ಮತ್ತು ನಾಳೆ ಒಂದೇ ರೀತಿ ಇರಬಾರದು. ಒಬ್ಬನು ಒಳಿತಿನ ದೃಷ್ಟಿಯಲ್ಲಿ ಇಂದಿಗಿಂತ ನಾಳೆ ಅಭಿವೃದ್ಧಿ ಹೊಂದಿಲ್ಲವಾದರೆ ಅವನು ನಷ್ಟದಲ್ಲಿರುವವನಾಗಿದ್ದಾನೆ. ಒಬ್ಬನು ಅಲ್ಲಾಹನನ್ನು ನಂಬುವವನೂ ಅವನ ಬಗ್ಗೆ ಪರಿಪೂರ್ಣ ವಿಶ್ವಾಸ ಹೊಂದಿದವನೂ ಆಗಿದ್ದರೆ ಅವನೆಂದೂ

ನಾಶಗೊಳಿಸಲ್ಪಡಲಾರನು. ಇದು ಬಹಳ ಗಹನವಾಗಿ ಚಿಂತಿಸಬೇಕಾದ ವಿಚಾರವಾಗಿದೆ. ಅಲ್ಲಾಹನು ನಮಗೆ ಅನುಗ್ರಹ ನೀಡಿದಾಗ ಅದಕ್ಕೆ ಅವನಿಗೆ ಕೃತಜ್ಞತೆ ಅರ್ಪಿಸುವುದು ನಮ್ಮ ಕಡ್ಡಾಯ ಕರ್ತವ್ಯ ಆಗಿದೆ. ಯಾವ ಜನರು ತಮ್ಮ ಲೌಕಿಕ ಕಾರ್ಯಭಾರಗಳ ಕಾರಣದಿಂದ ಅಲ್ಲಾಹನಿಗೆ ಸಂಬಂಧಿಸಿದ ಹಕ್ಕುಗಳನ್ನು ಮತ್ತು ಆರಾಧನೆಗಳನ್ನು ಮರೆತು ಬಿಟ್ಟಿರುವರೋ ಅಥವಾ ಅವುಗಳ ಬಗ್ಗೆ ಲಕ್ಷ್ಯನೀಡುತ್ತಿಲ್ಲವೋ ಅಂತಹ ಜನರು ತಮ್ಮ ಸ್ಥಿತಿಯನ್ನು ಪರಿಶೋಧಿಸಬೇಕು. ನಮ್ಮ ಬೈಅತ್ ಪ್ರತಿಜ್ಞೆ ಏನು ಮತ್ತು ನಮ್ಮ ಕರ್ಮಗಳು ಹೇಗಿವೆ ಎಂದು. ಇಲ್ಲಿಗೆ ಹೊಸದಾಗಿ ಆಗಮಿಸಿದವರು ಸಹ ನೆನಪಿಡಬೇಕು. ಕೇವಲ ಲೌಕಿಕ ಕಾರ್ಯಗಳಲ್ಲಿ ಮುಳುಗಿರುವುದು ಅಭಿವೃದ್ಧಿಯ ಸೂಚನೆಯಲ್ಲ, ಅದು ವಿನಾಶಕರವಾಗಿದೆ. ಅವರು ಯಾವಾಗಲೂ ನೆನಪಿಡಬೇಕು ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡಬೇಕು ಎಂದು. ಅವರು ಮಸ್‌ಜಿದ್‌ಗಳ ಹಕ್ಕುಗಳನ್ನು ಈಡೇರಿಸುವವರಾಗಬೇಕು. ಅಲ್ಲಾಹನಿಗೆ ಆರಾಧನೆ ಮಾಡುವ ಹಕ್ಕು ಈಡೇರಿಸುವವರಾಗಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೀವು ನೆನಪಿಡಿರಿ, ಸಾಮಾನ್ಯ ಲೌಕಿಕ ಮನುಷ್ಯ ಜೀವಿಸುವ ರೀತಿಯಲ್ಲಿ ಜೀವಿಸಲಿಕ್ಕೋಸ್ಕರವಲ್ಲ ನಮ್ಮ ಜಮಾಅತ್ ಸ್ಥಾಪಿಸಿರುವುದು. ನೀವು ಕೇವಲ ಬಾಯಿಮಾತಿನಲ್ಲಿ ಹೇಳಿ ಕರ್ಮವೇನೂ ಮಾಡದಿರುವುದನ್ನು ನಾನು ಇಚ್ಛಿಸುವುದಿಲ್ಲ. ಇದು ಬಹಳ ಹೀನ ಸ್ಥಿತಿಯಾಗಿದೆ. ಅದನ್ನು ಅಲ್ಲಾಹನು ಇಷ್ಟಪಡುವುದಿಲ್ಲ. ಲೋಕದ ಈ ಸ್ಥಿತಿಯೇ ಆವಶ್ಯಪಟ್ಟಿದೆ ಅಲ್ಲಾಹನು ನನ್ನನ್ನು ಲೋಕದ ಸುಧಾರಣೆಗೆ ಎಬ್ಬಿಸಿ ನಿಲ್ಲಿಸಲು. ನೆನಪಿಡಿರಿ, ಅಲ್ಲಾಹನು ಸ್ಥಾಪಿಸಲು ಇಚ್ಛಿಸುವ ಜಮಾಅತ್ ಕರ್ಮಗಳಿಲ್ಲದೆ ಜೀವಂತವಾಗಿರಲಾರದು. ಇದು ಎಂತಹ ವೈಭವಶಾಲಿ ಜಮಾಅತ್ ಆಗಿದೆ ಎಂದರೆ ಅದರ ಬಗ್ಗೆ ಸಿದ್ಧತೆಗಳು ಹಝ್ರತ್ ಆದಮರ ಕಾಲದಿಂದಲೇ ಪ್ರಾರಂಭವಾಗಿದೆ. ಈ ಆಹ್ವಾನದ ಬಗ್ಗೆ ಸಮಾಚಾರ ನೀಡದ ಯಾವ ಪ್ರವಾದಿಯೂ ಆಗಮಿಸಿಲ್ಲ. ನೀವು ಈ ಜಮಾಅತ್‌ಗೆ ಮಹತ್ವ ನೀಡಿರಿ. ನೀವು ನಿಮ್ಮ ಕರ್ಮಗಳಿಂದ ಸತ್ಯವಂತರ ಗುಂಪು ನೀವೇ ಎಂದು ಸಾಬೀತುಗೊಳಿಸಿ ತೋರಿಸಿರಿ. ಇದು ಸುಲಭದ ಕೆಲಸವೇನೂ ಅಲ್ಲ. ಬಹಳ ಗಹನವಾಗಿ ಇದರ ಬಗ್ಗೆ ಚಿಂತಿಸಬೇಕಾಗಿದೆ. ಯಾವಾಗಲೂ ನೆನಪಿಡಬೇಕಾದುದೇನೆಂದರೆ ಲೌಕಿಕ ಸಂಪತ್ತು ನಮ್ಮ ಮತ್ತು ನಮ್ಮ ಸಂತಾನಗಳ ಬದುಕುಳಿಯುವಿಕೆಗೆ ಖಾತರಿ ನೀಡಲಾರದು. ಬದಲಾಗಿ ಇಹಪರಲೋಕಗಳಲ್ಲಿ ಅಲ್ಲಾಹನ ಅನುಗ್ರಹ ಮತ್ತು ಕಾರುಣ್ಯ ಗಳಿಸಲು ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸುವುದು ನಮ್ಮ ಬದುಕುಳಿಯುವಿಕೆಗೆ ಖಾತರಿ ನೀಡುವುದು. ಅಲ್ಲಾಹನ ಆಜ್ಞೆಗಳನ್ನು ಪಾಲಿಸುವುದು ನಮ್ಮ ಬದುಕುಳಿಯುವಿಕೆಗೆ ಖಾತರಿ ನೀಡುವುದು. ಪ್ರತಿಯೊಬ್ಬನಿಗೂ ಈ ರೀತಿ ಜೀವಿಸುವ ಭಾಗ್ಯವನ್ನು ಅಲ್ಲಾಹನು ದಯಪಾಲಿಸಲಿ – ಆಮೀನ್.

ಈ ಮಸ್‌ಜಿದ್ ಬಗ್ಗೆ ಸಂಕ್ಷಿಪ್ತ ಮಾಹಿತಿ ಹೀಗಿದೆ: ಇದಕ್ಕೋಸ್ಕರ 2007ರಲ್ಲಿ ಜಮೀನು ಖರೀದಿಸಲಾಯಿತು. 2013ರಲ್ಲಿ ಮಸ್‌ಜಿದ್ ನಿರ್ಮಾಣ ಕೆಲಸ ಪ್ರಾರಂಭಿಸಲಾಯಿತು. ಈ ವರ್ಷ ಅದರ ನಿರ್ಮಾಣ ಪೂರ್ಣಗೊಂಡಿದೆ. 8.1 ಮಿಲಿಯನ್ ಡಾಲರ್ ಖರ್ಚಾಗಿದೆ. ಅದರಲ್ಲಿ ಸ್ಥಳೀಯ ಜಮಾಅತ್ 2 ಮಿಲಿಯ, ನಾಲ್ಕುನೂರ ಮೂವತ್ತೈದು ಸಾವಿರ (2,435,00) ಡಾಲರ್ ದೇಣಿಗೆಯಾಗಿ ನೀಡಿದೆ. ಒಂದು ಮಿಲಿಯ, ಇನ್ನೂರ ನಲ್ವತ್ತು ಸಾವಿರ (1,240,000) ಡಾಲರ್ ಅಮೇರಿಕದ ಇತರ ಜಮಾಅತ್‌ಗಳು ನೀಡಿವೆ. ನಾಲ್ಕು ಮಿಲಿಯ, ನಾಲ್ಕುನೂರ ನಲ್ವತ್ತೇಳು ಸಾವಿರ (4,447,000) ಡಾಲರ್ ನೇಶನಲ್ ಹೆಡ್‌ಕ್ವಾರ್ಟರ್ಸ್ ನೀಡಿದೆ. ಈ ಮಸ್ಜಿದ್ ನಿವೇಶನ ನಾಲ್ಕು ಎಕರೆ ವಿಸ್ತೀರ್ಣ ಹೊಂದಿದೆ. ಕಟ್ಟಡವು ಮೂರು ಮಾಳಿಗೆಗಳನ್ನು ಹೊಂದಿದೆ. ಪುರುಷರ ಮತ್ತು ಮಹಿಳೆಯರ ಹಾಲ್‌ಗಳು ಐದು ಸಾವಿರ ಚದರ ಅಡಿ ವಿಸ್ತೀರ್ಣ ಹೊಂದಿದೆ.

ಪ್ರತಿಯೊಬ್ಬ ಅಹ್ಮದಿ ಮಸ್‌ಜಿದ್ ನಿರ್ಮಾಣದ ಉದ್ದೇಶಲಕ್ಷ್ಯಗಳನ್ನು ಈಡೇರಿಸುವವನಾಗುವಂತೆ ಅಲ್ಲಾಹನು ಮಾಡಲಿ. ಇಸ್ಲಾಮಿನ ನೈಜ ತತ್ವಗಳನ್ನು ಹರಡಲು ಈ ಮಸ್‌ಜಿದ್ ಈ ಪ್ರದೇಶದಲ್ಲಿ ಒಂದು ಮೈಲುಗಲ್ಲು ಆಗುವಂತಾಗಲಿ – ಆಮೀನ್.

——————————*****——————————

***Friday Sermon delivered by Hadrath Khaleefatul Masih Al Khamis***(*atba*)

*At,Baithul Aafiyat Mosque, Philadelphia. USA On 19-10-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***:*khutuba.kannada@gmail.com*

**You can find all the Sermons archived at**: www.alislam.org/friday-sermon